Sri H. C. DASAPPA (Minister for Finance and Industries).—Whatever it is, Hon'ble Member cannot dispute the ruling of the Chair.

Mr. SPEAKER.—The Chair holds that it does not arise.

Sri K. PUTTASWAMY.—Sir, there is another mistake of fact which if not corrected, would lead to further questions and it is this. The Hon'ble Minister was pleased to state that the University was an autonomous body. I very respectfully submit that it is not. Rather Dr. Reddy has recommended that it be made an autonomous body.

Sri H. SIDDAVEERAPPA (Chitaldrug District—General)—Sir, what is the tenure of the appointment of Dr. Reddy?

Mr. SPEAKER.—Dr. Reddy's appointment does not arise out of this question.

ಶ್ರೀ ಡಿ. ಎಂ. ಸಿದ್ದಯ್ಯನವರು (ಮೈಸೂರು ಜಿಲ್ಲೆ).—ಈ ಪ್ರಶ್ನೆಯಲ್ಲಿ 'existing educational system' ಎಂದಿದೆ. ಇದರಲ್ಲಿ ವಿಶ್ವವಿದ್ಯಾನಿಲಯ ವಿದ್ಯಾಭ್ಯಾಸ, ಹೈಸ್ಕೂಲು ವಿದ್ಯಾಭ್ಯಾಸ—ಎರಡೂ ಸೇರಿವೆಯೆ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಎಲ್ಲಾ ಸೇರಿವೆ.

ಶ್ರೀ ಡಿ. ಎಂ. ಸಿದ್ದಯ್ಯನವರು.—ಹಾಗಾದರೆ ಈಗ ಜಾರಿಯಲ್ಲಿರುವ ವಿಶ್ವವಿದ್ಯಾನಿಲಯದ ವಿದ್ಯಾಭ್ಯಾಸ ವ್ಯವಸ್ಥೆ ಯಾರಿಂದ ಪ್ರಾರಂಭವಾಯಿತು ಮತ್ತು ಯಾವಾಗಿನಿಂದ ಜಾರಿಯಲ್ಲಿದೆ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ನೋಟೀಸ್.

Sri M. V. KRISHNAPPA.—Can a student studying in the University ask questions about the same University? (Laughter!)

ಶ್ರೀ ಡಿ. ಎಂ. ಸಿದ್ದಯ್ಯನವರು.—ಈಗಿರುವ ಕ್ರಮವನ್ನು ಬದಲಾಯಿಸಿ ಹೊಸದಾದ ವಿದ್ಯಾಭ್ಯಾಸ ಕ್ರಮವನ್ನು ಜಾರಿಗೆ ತರಬೇಕೆಂಬುದು ಉದ್ದೇಶವೆ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಹೌದು.

ಶ್ರೀ ಡಿ. ಎಂ. ಸಿದ್ದಯ್ಯನವರು.—ಹಾಗಾದರೆ ಹೊಸ ದೃಷ್ಟಿಯಿಂದ ನೋಡಿದರೆ ಡಾಕ್ಟರು ರೆಡ್ಡಿಯವರ ವರದಿಯಲ್ಲ ದೇಶಕ್ಕೆ ಉಪಯೋಗವಾಗುವ ಯಾವ ದಾದರೂ ಸಲಹೆ ಇದೆಯೆ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ನಾವು ಇದೆಯೆಂದು ತಿಳಿದುಕೊಂಡಿದ್ದೇವೆ.

ಶ್ರೀ ಡಿ. ಎಂ. ಸಿದ್ದಯ್ಯನವರು.—ಡಾಕ್ಟರ್ ರೆಡ್ಡಿಯವರಿಗೆ ವಾರ್ಧಾ ಶಿಕ್ಷಣ ಪದ್ಧತಿಯಲ್ಲಿ ಅನುಭವವಿದೆಯೆ? ಅವರು educational expert ಎಂದು ಯಾರ್ಯಾರು ಹೇಳಿದರು?

ಅಧ್ಯಕ್ಷರು.—"He is an educational expert admitted on all hands" ಎಂದು ಆಗಲೇ ಅವರು ಉತ್ತರ ಹೇಳಿದ್ದಾರೆ.

ಶ್ರೀ ಎಂ. ಸಿ. ಶಿವಾನಂದ ಶರ್ಮರವರು (ಬೆಂಗಳೂರು ಜಿಲ್ಲೆ).—ವೈಸ್‌ಛಾನ್ಸೆಲರವರ ಮೇಲೆ ಪ್ರೊಛಾನ್ಸೆಲರನ್ನು ನೇಮಿಸಿರುವುದರಿಂದ ವೈಸ್‌ಛಾನ್ಸೆಲರವರಿಗೆ ಅನಮಾಧಾನವಾಗುವುದಿಲ್ಲವೆ?

Mr. SPEAKER.—That does not arise out of this question.

Sri T. SUBRAMANYA.—Are the Government aware that Dr. C. R. Reddy is opposed to the Wardha System of Education?

Sri T. SIDDALINGIAH.—We are not aware.

Sri H. C. LINGA REDDY (Kolar District—General).—Was the University consulted before Dr. Reddy was appointed to make the report?

Sri T. SIDDALINGIAH.—No.

Sri H. C. LINGA REDDY.—Was the University consulted before he was appointed as Pro-Chancellor?

Sri T. SIDDALINGIAH.—There was no such necessity.

Mr. SPEAKER.—Question No. 110 Sri Sampangi Ramiah (Not present). Question No. 110 will be treated as an unstarred question.

Mr. SPEAKER.—Question No. 140. Sri T. Madiah Gowda.

Improvement of prospects of Primary School Teachers.

*Q. 140—**Sri T. MADIAH GOWDA** (Bangalore District—General).—

Will the Government be pleased to state:—

the steps they intend taking to improve the prospects of the primary school teachers?

A.—**Sri T. SIDDALINGIAH** (Minister for Education and Public Health).—

The pay of these teachers has been revised recently and further revision is not contemplated.

ಶ್ರೀ ಟಿ ಮಾದಯ್ಯಗೌಡರು.—ಪ್ರಾಥಮಿಕ ಶಾಲೆಗಳ ಉಪಾಧ್ಯಾಯರ ಸಂಬಳ ರಿವೈಸ್ ಆದದ್ದು ಯಾವಾಗ?

ಶ್ರೀ ಟಿ. ಸಿದ್ದಲಿಂಗಯ್ಯನವರು.—1-1-1947ರಲ್ಲಿ.

ಶ್ರೀ ಟಿ. ಮಾದಯ್ಯಗೌಡರು.—ಈಚೆಗೆ ಮಾನ್ಯ ವಿದ್ಯಾಮಂತ್ರಿಗಳು ಪ್ರವಾಸ ಮಾಡುವಾಗ ಅನೇಕ ಪ್ರೈಮರಿ ಸ್ಕೂಲು ಉಪಾಧ್ಯಾಯರು ತಮ್ಮ ಸಂಬಳಗಳನ್ನು ಉತ್ತಮಪಡಿಸಿಕೊಡಬೇಕೆಂದು ಅವರಲ್ಲಿ ಅರಿಕೆ ಮಾಡಿಕೊಂಡರೆ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಹೌದು.

ಶ್ರೀ ಟಿ. ಮಾದಯ್ಯಗೌಡರು.—ಮಾನ್ಯ ಮಂತ್ರಿಗಳು ಅದನ್ನು ತುಂಬಾ ಸಹಾನುಭೂತಿಯಿಂದ ಯೋಚನೆ ಮಾಡುವುದಾಗಿ ಭರವಸೆ ಕೊಟ್ಟಿದ್ದಾರೆಯೆ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಯಾವತ್ತೂ ಸರ್ಕಾರ ಅವರ ಹಿತವನ್ನು ಸಹಾನುಭೂತಿಯಿಂದ ನೋಡುತ್ತಾರೆ.

ಶ್ರೀ ಟಿ. ಮಾದಯ್ಯಗೌಡರು.—ಮುಂದಿನ ಜನಾಂಗ ಅವರ ಕೈಯ್ಯಲ್ಲರುವುದರಿಂದ ಈ ಉಪಾಧ್ಯಾಯರುಗಳಿಗೆ ಆಕರ್ಷಣೀಯವಾದ ಸಂಬಳ ಗೊತ್ತು ಮಾಡುವುದು ಅಗತ್ಯವಲ್ಲವೆ ?

ಅಧ್ಯಕ್ಷರು.—ಅದು ಸಲಹೆ, ಸಮಾಚಾರ ಕೇಳಿ.

ಶ್ರೀ ಟಿ. ಮಾದಯ್ಯಗೌಡರು.—ಸರ್ಕಾರದವರು ಪ್ರೈಮರಿ ಸ್ಕೂಲು ಉಪಾಧ್ಯಾಯರುಗಳ ಹಿತಚಿಂತನೆ ಮಾಡುವುದರಿಂದ ಕೂಡಲೇ ಅವರ ಸಂಬಳ ಸಾರಿಗೆ ಗಳನ್ನು ಉತ್ತಮಪಡಿಸಲು ಏನಾದರೂ ಏರ್ಪಾಡು ಮಾಡುತ್ತಾರೆಯೇ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಅವರ ಸಂಬಳ ಗಳು ಇತ್ತೀಚೆಗೆ ರಿವೈಸ್ ಆಗಿರುವುದರಿಂದ ಪುನಃ ಇಷ್ಟು ಬೇಗ ಬದಲಾವಣೆ ಮಾಡುವ ಯೋಚನೆಯಿಲ್ಲ.

ಶ್ರೀ ಟಿ. ಮಾದಯ್ಯಗೌಡರು.—ಇನ್ನೆಷ್ಟು ಕಾಲ ಆದ ಮೇಲೆ ಮಾಡುತ್ತೀರಿ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಅದು ಊಹಾ ಪ್ರಶ್ನೆ ಆಯಿತು.

ಶ್ರೀ ಎಂ. ವಿ. ಕೃಷ್ಣಪ್ಪನವರು (ಕೋಲಾರ ಜಿಲ್ಲೆ).—ಪ್ರೈಮರಿ ಸ್ಕೂಲುಗಳ ಉಪಾಧ್ಯಾಯರುಗಳಿಗೆ ಸಾಮಾನ್ಯವಾಗಿ ಮಕ್ಕಳು ಹೆಚ್ಚಿಲ್ಲವೆ ? (ನಗು !)

(ಉತ್ತರವಿಲ್ಲ.)

Sri D. H. CHANDRASEKHARAIYA (Chitaldrud District—General).—Is it not a fact that there are two scales of salaries for the primary school teachers ?

Sri K. PUTTASWAMY (Mandya District—General).—The Hon'ble Member who is now putting the question knows all the information. In fact all our questions should have been directed to him.

Sri D. H. CHANDRASEKHARAIYA.—I am only asking question as a member of the House.

Sri T. SIDDALINGIAH.—I take it that the ex-Minister wants to help the House to understand the problem properly.

Sri D.H.CHANDRASEKHARAIYA.—There were two grades of salaries for the primary school teachers : one commencing from 25 upwards and another commencing from 30 upwards. Is it not a fact ?

Sri T. SIDDALINGIAH.—There were.

Sri D.H.CHANDRASEKHARAIYA.—Have not the Government made arrangements to give emergency training to primary school teachers so that they may have the benefit of the second grade of Rs. 30 ?

Sri T. SIDDALINGIAH.—Yes, it is also done.

Sri D.H. CHANDRASEKHARAIYA.—Have all the teachers who are now given emergency training during the last two years been given the higher grade of salary ?

Sri T. SIDDALINGIAH.—According to that scale they have been already kept under that payment, trained and untrained with a little difference. They are already given the benefit.

ಶ್ರೀ ಜಿ. ನಾರಾಯಣಗೌಡರು (ಕೋಲಾರ ಜಿಲ್ಲೆ).—ಪ್ರಾಥಮಿಕ ಶಾಲೆಗಳ ಉಪಾಧ್ಯಾಯರಲ್ಲಿ ಎಸ್. ಎಸ್. ಎಲ್. ಸಿ. ಪಾಸುಮಾಡಿರುವವರೆಷ್ಟು ಜನ ರಿದ್ದಾರೆ ?

ಶ್ರೀ ಟಿ ಸಿದ್ದಲಿಂಗಯ್ಯನವರು.—ನೋಟೀಸ್.

ಶ್ರೀ ಜಿ. ನಾರಾಯಣಗೌಡರು.—ಹಾಗೆ ಎಸ್. ಎಸ್. ಎಲ್. ಸಿ. ಪಾಸು ಮಾಡಿರುವವರಿಗೆ ಸಂಬಳ ಸಮಿತಿಯವರು ಎಷ್ಟು ಸಂಬಳ ಕೊಡಬೇಕೆಂದು ಸಲಹೆ ಮಾಡಿದರು ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ನೋಟೀಸ್.

ಶ್ರೀ ಜಿ. ನಾರಾಯಣಗೌಡರು.—ಎಸ್. ಎಸ್. ಎಲ್. ಸಿ. ಪಾಸು ಮಾಡಿದ ಉಪಾಧ್ಯಾಯರುಗಳು ಪ್ರಾಥಮಿಕ ಪಾಠಶಾಲೆಗಳಲ್ಲಿದ್ದುಕೊಂಡು ಕಡಿಮೆ ಸಂಬಳವನ್ನು ತೆಗೆದುಕೊಳ್ಳುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಈಗ ಹೇಳುವುದ ಕ್ಕಾಗುವುದಿಲ್ಲ.

ಶ್ರೀ ಜಿ. ನಾರಾಯಣಗೌಡರು.—ಹಾಗೆ ತಮ್ಮ ಗಮನಕ್ಕೆ ಬಂದರೆ ಅವರಿಗೆ ಸಂಬಳ ಸಮಿತಿಯ ಶಿಫಾ ರಸ್ಸಿನ ಪ್ರಕಾರ ಸಂಬಳ ಕೊಡುತ್ತೀರಾ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಅದು ಸರ್ಕಾರದ ಮುಂದೆ ಬಂದಾಗ ಯೋಚನೆ ಮಾಡುತ್ತೇವೆ.

ಶ್ರೀ ಎಂ. ವಿ. ಕೃಷ್ಣಪ್ಪನವರು (ಕೋಲಾರ ಜಿಲ್ಲೆ).—ಮಾನ್ಯ ಮಂತ್ರಿಗಳು ಮೈಸೂರಿಗೆ ಹೋಗಿದ್ದಾಗ ಉಪಾಧ್ಯಾಯರುಗಳು ಬಿನ್ನವತ್ತಳೆಯನ್ನು ಕೊಟ್ಟ ಸಂದರ್ಭದಲ್ಲಿ ಸಂಬಳವನ್ನು ರಿವೈಸ್ ಮಾಡುವುದಕ್ಕೆ ಒಂದು ಕಮಿಷನ್ ಏರ್ಪಾಡು ಮಾಡುತ್ತೇವೆ ಎಂಬು ದಾಗಿ ಭರವಸೆ ಕೊಟ್ಟಿರುವುದು ನಿಜವೇ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಆ ರೀತಿ ಯಾವ ಬಿನ್ನವತ್ತಳೆಯನ್ನು ಕೊಡಲೂ ಇಲ್ಲ, ತೆಗೆದುಕೊಳ್ಳಲೂ ಇಲ್ಲ ಮತ್ತು ಭರವಸೆಯನ್ನೂ ಕೊಟ್ಟಿಲ್ಲ.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಉಪಾಧ್ಯಾಯರು ಸಂಬಳ ಹೆಚ್ಚು ಮಾಡಬೇಕೆಂದು ಅರಿಕೆ ಮಾಡಿಕೊಂಡರ ಅದನ್ನು ಪರಿಶೀಲನೆ ಮಾಡಲು ಒಂದು ಸಮಿತಿಯನ್ನು ಏರ್ಪಡಿಸುತ್ತೇವೆ ಎಂದು ಭರವಸೆಯನ್ನು ಕೊಟ್ಟಿಲ್ಲವೇ ?

Sri T. SIDDALINGIAH.—I have already answered the question.

ಶ್ರೀ ಕೆ. ಸುಬ್ಬರಾಯರು (ಬೆಂಗಳೂರು ಜಿಲ್ಲೆ).—ಪ್ರಾಥಮಿಕ ಶಾಲೆಯ ಉಪಾಧ್ಯಾಯರುಗಳಿಗೆ ಇಷ್ಟೇ ಅರ್ಹತೆ ಇರಬೇಕೆಂದು ಇದೆಯೇ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಇದೆ.

ಶ್ರೀ ಕೆ. ಸುಬ್ಬರಾಯರು.—ಹಾಗಾದರೆ ಅದಕ್ಕೆ ತಕ್ಕಂತೆ ಸಂಬಳ ಏನಾದರೂ ನಿಗದಿ ಮಾಡಿದ್ದೀರಾ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಅದೂ ಕೊಡ ಮಾಡಿದೆ.

ಶ್ರೀ ಕೆ. ಸುಬ್ಬರಾಯರು.—ಈ ರೀತಿ ಒಂದು ಅರ್ಹತೆ ಇರುವವರು ಇನ್ನೊಂದು ದರ್ಜೆಗೆ ಹೋದರ

ಆ ಎರಡನೇ ದರ್ಜೆಯ ನಂಬಳ ಅವರಿಗೆ ದೊರೆಯುತ್ತದೆಯೇ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಖಂಡಿತವಾಗಿಯೂ ದೊರೆಯುತ್ತದೆ.

ಶ್ರೀ ಕೆ. ಸುಬ್ಬರಾಯರು.—ಈಗ ಸಂಸ್ಥಾನದಲ್ಲಿ ಅನೇಕ ಕಡೆ ಪ್ರೈಮರಿ ಪಾಠಶಾಲೆಗಳಿಗೆ ಉಪಾಧ್ಯಾಯರುಗಳಿಲ್ಲದೆ ಕೊರತೆ ಇದೆ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಬಂದಿದೆ.

ಶ್ರೀ ಕೆ. ಸುಬ್ಬರಾಯರು.—ಅವರಲ್ಲಿ ಅನೇಕರಿಗೆ ಎರಡನೇ ದರ್ಜೆಯ ನಂಬಳ ಕೊಡದೇ ಇರುವುದರಿಂದ ಅಸಮಾಧಾನ ಹುಟ್ಟಿಕೊಂಡಿದೆ ಎಂಬುದು ಗೊತ್ತೇ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಅದೆಲ್ಲವನ್ನು ಈಗ ಪುನರಾಲೋಚನೆ ಮಾಡುತ್ತಾ ಇದ್ದಾರೆ. ಎಲ್ಲೆಲ್ಲಿ ಉಪಾಧ್ಯಾಯರಿಲ್ಲವೋ ಅಲ್ಲಿಗೆಲ್ಲಾ ಕೆಲವು ರೂಲ್ಸ್‌ಗಳನ್ನು ನಡಿಲವಾಸಿ ಭರ್ತಿಮಾಡಬೇಕೆಂಬ ಆಲೋಚನೆ ಇದೆ.

ಶ್ರೀ ಕೆ. ಸುಬ್ಬರಾಯರು.—ಪ್ರೈಮರಿ ಶಾಲೆಗಳಲ್ಲಿ ಸರ್ವಿಸ್ ಮುಗಿದು ಪೆಷ್ಷ ತೆಗೆದುಕೊಳ್ಳಬೇಕಾದವರಿದ್ದಾರೆ, ಉಪಾಧ್ಯಾಯರ ಆಭಾವವಿರುವುದರಿಂದ ಅವರಿಗೆ ಎಕ್ಸ್‌ಟೆಷ್ಷ ಕೊಡುವುದಕ್ಕೆ ಆಲೋಚನೆ ಮಾಡುತ್ತೀರಾ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಭರವಸೆಯನ್ನು ಕೊಡಲಾರೆ. ಅದೂ ಆಲೋಚನೆಯಲ್ಲಿದೆ.

ಶ್ರೀ ಕಡಿದಾಳ್ ಮಂಜಪ್ಪನವರು (ಶಿವಮೊಗ್ಗಾ ಜಿಲ್ಲೆ).—ದೊಡ್ಡ ದೊಡ್ಡ ಪ್ರೈಮರಿ ಶಾಲೆಯ ಉಪಾಧ್ಯಾಯರುಗಳಿಗೆ ಮನೆ ಆಲೋಯನ್ಸ್ ಕೊಡುವ ಏರ್ಪಾಡು ಇದೆಯೇ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ನೋಟೀಸ್.

Sri Kadidal MANJAPPA.—Have the Government received any representation from these teachers to the effect that Government should not levy fees from the children of these teachers studying in schools and colleges ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಕೆಲವು ಕಡೆ ಅರಿಕೆ ಮಾಡಿಕೊಂಡಿರಬಹುದು. But Government are not able to give such facilities to teachers.

Sri Kadidal MANJAPPA.—In the case of those studying in the high schools ?

(No Answer)

ಶ್ರೀ ಬಿ. ಎಂ. ಶಾಮಣ್ಣಗೌಡರು (ಬೆಂಗಳೂರು—ರಿಟ್ರಾಸೀಡೆಡ್ ಪ್ರದೇಶ).—ಪ್ರೈಮರಿ ಸ್ಕೂಲು ಉಪಾಧ್ಯಾಯರಿಗೆ ಕೊಡುವ ಸಂಬಳದಲ್ಲಿ ಅವರ ಜೀವನ ಸುಗಮವಾಗಿ ನಡೆಯುತ್ತದೆಯೇ, ಅದು ಬಹಳ ಕಡಿಮೆಯಲ್ಲವೇ ?

ಅಧ್ಯಕ್ಷರು.—ಅದು ಎಲ್ಲರಿಗೂ ಗೊತ್ತೇ ಇದೆ.

ಶ್ರೀ ಎಂ. ಮಾದಯ್ಯನವರು (ಮೈಸೂರು ಜಿಲ್ಲೆ ನಿಮ್ಜ ಪಂಗಡ).—ಪ್ರೈಮರಿ ಉಪಾಧ್ಯಾಯರ ನಂಬಳಗಳು ಇತ್ತೀಚೆಗೆ ರಿವೈಸ್ ಮಾಡಿದೆ ಎಂದು ಹೇಳಿದಿರಿ. ಅದು ಆಗುವುದಕ್ಕೆ ಮುಂಚೆ ಇದ್ದ ಗ್ರೇಡಿಗೂ, ಆದ ಮೇಲೆ ಇರುವ ಗ್ರೇಡಿಗೂ ಏನು ವ್ಯತ್ಯಾಸವಿದೆ ಎಂಬುದನ್ನು ಹೇಳುತ್ತೀರಾ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಹಳೇ ಗ್ರೇಡು ಇದ್ದದ್ದು ತರಬೇತಾದ ಉಪಾಧ್ಯಾಯರಿಗೆ ರೂ. 25-1-30. ರಿವೈಸ್ ಆದ ಮೇಲೆ ರೂ. 30-1½-45 -2-55 ಆಗಿದೆ. ತರಬೇತಾಗಿಲ್ಲದ ಉಪಾಧ್ಯಾಯರಿಗೆ ರೂ. 20—1—35ಇದ್ದದ್ದು ರೂ. 25-1-30—1-45 ಆಗಿದೆ.

Sri T. MARIAPPA (Home Minister).—May I respectfully suggest that in the case of published Government Orders questions could be avoided ?

ಶ್ರೀ ಎಂ. ಮಾದಯ್ಯನವರು.—ನಮ್ಮ ಅಕ್ಕಪಕ್ಕದ ಪ್ರಾಂತ್ಯವಾದ ಮದರಾಸು ಮತ್ತು ಬೊಂಬಾಯಿ ಪ್ರಾಂತ್ಯಗಳಲ್ಲಿ ಕೊಡತಕ್ಕ ಸ್ಕೇಲುಗಳಿಗೂ ನಮ್ಮ ಸ್ಕೇಲುಗಳಿಗೂ ಏನು ವ್ಯತ್ಯಾಸವಿದೆ, ಅಥವಾ ಅಲ್ಲಿ ಏನು ಕೊಡುತ್ತಾರೆ ಎಂಬುದನ್ನು ಹೇಳುವುದಕ್ಕಾಗುತ್ತದೆಯೆ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಈಗಲೇ ಹೇಳುವುದಕ್ಕಾಗುವುದಿಲ್ಲ; ನೋಟೀಸ್.

ಶ್ರೀ ಕೆ. ಪುಟ್ಟಸ್ವಾಮಿಯವರು.—ಪ್ರೈಮರಿ ಸ್ಕೂಲು ಉಪಾಧ್ಯಾಯರುಗಳಿಗೆ ವಾಸಕ್ಕೆ ಮನೆಯೂ ಇಲ್ಲದೆ ಬಹಳ ಮಟ್ಟಿಗೆ ತೊಂದರೆಯಾಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

Sri T. MARIAPPA.—It does not arise out of this question.

Sri T. SIDDALINGIAH.—It is already answered.

ಶ್ರೀ ಕೆ. ಪುಟ್ಟಸ್ವಾಮಿಯವರು (ಮಂಡ್ಯ ಜಿಲ್ಲೆ).—ಮೈಸೂರು, ಬೆಂಗಳೂರುಗಳಲ್ಲಿ ಮಿಲ್ಲುಗಳಲ್ಲಿ ಕೊಡುವ ತುಟ್ಟಿ ಭತ್ಯಕ್ಕಿಂತಲೂ ಈ ಉಪಾಧ್ಯಾಯರುಗಳ ನಂಬಳ ಕಡಿಮೆ ಆಗಿದೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

Sri T. SIDDALINGIAH.—It is a matter of opinion.

Sri K. PUTTASWAMY.—It is a matter of fact.

Sri T. SIDDALINGIAH. – Also of opinion.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಈಗ ನಮಗೆ ಸೇರಿದ 67 ಗ್ರಾಮಗಳಲ್ಲಿ ಅಲ್ಲಿನ ಉಪಾಧ್ಯಾಯರಿಗೆ ಏನು ಸಂಬಳ ಕೊಡುತ್ತಾ ಇದ್ದಾರೆ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ನೋಟೀಸ್.

ಶ್ರೀ ಎಸ್. ರಂಗರಾಮಯ್ಯನವರು.—ಅಲ್ಲಿ ನಮ್ಮ ಪಾಠಶಾಲೆಗಳನ್ನೇನಾದರೂ ಪ್ರಾರಂಭಿಸಿದ್ದೀರಾ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ನೋಟೀಸ್.

ಶ್ರೀ ಎಸ್. ರಂಗರಾಮಯ್ಯನವರು.—ಅಲ್ಲಿ ಶಾಲೆಗಳು ಇವೆಯೋ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ನೋಟೀಸ್.

ಶ್ರೀ ಎಸ್. ರಂಗರಾಮಯ್ಯನವರು.—ಆ ರೀತಿ ಶಾಲೆಗಳು ಇಲ್ಲದೇ ಇದ್ದರೆ ಹೊಸದಾಗಿ ತೆರೆಯುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಅಧ್ಯಕ್ಷರು.—ಶಾಲೆಗಳು ಇಲ್ಲದೆ ಇರುವ ಪ್ರದೇಶಗಳಾವುದು ಇರುತ್ತದೆ ಎಲ್ಲಾ ಕಡೆಯೂ ಇದ್ದೇ ಇರುತ್ತದೆ.

Sri M. GOVINDA REDDY (Chitaldrug District—General).—As a meaure of helping the teachers and improving their

prospects will the Government consider the question of giving Scholarships to the children of the teachers who study in schools?

Mr. SPEAKER.—How does it arise out of this?

Sri M. GOVINDA REDDY.— This relates to the improving of the prospects of the teachers.

ಶ್ರೀ ಜಿ. ಎ. ಆರ್ಯರವರು (ಬೆಂಗಳೂರು ಜಿಲ್ಲೆ).—ಖಾಸಗೀ ಪಾಠಶಾಲೆಗಳವರು ಉಪಾಧ್ಯಾಯರುಗಳಿಗೆ ಮನೆಗಳನ್ನು ಕಟ್ಟಿಸಿಕೊಟ್ಟರೆ ಸರ್ಕಾರದವರು ಏನಾದರೂ ಸಹಾಯ ಮಾಡುತ್ತಾರೆಯೇ?

Sri T. SIDDALINGIAH.—That does not arise.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—On a point of order, Sir. "That does not arise" ಎಂಬುದನ್ನು ಸ್ಪೀಕರ್‌ರವರು ಹೇಳಬಹುದೇ ಹೊರತು ಮಾನ್ಯ ಮಂತ್ರಿಗಳವರು ಹೇಳುವುದು ಸರಿಯಲ್ಲ.

Mr. SPEAKER.—I do not think so. If a supplementary does not arise out of the main question, the concerned Minister can say so.

Sri B. HUTCHE GOWDA.—It is for the Speaker to decide.

Mr. SPEAKER.—Next Question. Question No. 141.

Construction of buildings for Primary Schools.

*Q.—141. **Sri T. MADIAH GOWDA** (Bangalore District—General).—

Will the Government be pleased to state.—

(*a*) the amount sanctioned for the construction of primary school buildings for the year 1949-50 and for construction of how many buildings;

(*b*) the number of school buildings that are so far constructed for completely for the year 1949;

(*c*) the amount spent so far and the amount likely to lapse?

*A.—**Sri T. SIDDALINGIAH** (Minister for Education and Public Health).—

(*a*) Rs. 7,22,000.

(*b*) and (*c*) The work of construction of the buildings is entrusted to the Deputy Commissioners of Districts and the Presidents, District Boards, Mysore and Tumkur, except in the case of Bangalore City area where the work is entrusted to the Executive Engineer, Buildings Division, Bangalore. Details regarding the number of buildings constructed, etc., are not readily available.

ಶ್ರೀ ಟಿ. ಮಾದಯ್ಯಗೌಡರು.—ಗ್ರಾಮಾಂತರದ ಪ್ರೈಮರಿ ಪಾಠಶಾಲೆಗಳ ಕಟ್ಟಡಗಳನ್ನು ಕಟ್ಟುವುದಕ್ಕೆ ಜಿಲ್ಲಾ ಡೆಪ್ಯುಟಿ ಕಮಿಷನರ್‌ರವರಿಗೂ, ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರಿಗೂ ವಹಿಸಿದೆ ಎಂದು ಹೇಳಿದ್ದೀರಿ. ಆದರೂ ಅದರಿಂದ ಎಷ್ಟು ಹಣ ಖರ್ಚಾಯಿತು, ಎಷ್ಟು ಪಾಠಶಾಲೆಯ ಕಟ್ಟಡಗಳು ನಿರ್ಮಿತವಾದುವು ಎಂಬ ಅಂಕಿ ಅಂಶಗಳನ್ನು ಸರ್ಕಾರದವರು ಪಡೆಯುವುದಕ್ಕೆ ಸಾಧ್ಯವಾಗಿಲ್ಲವೇ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಸಮಾಚಾರ ಈಗ ಸಿದ್ಧವಾಗಿ ದೊರೆತಿಲ್ಲ. ಏಕೆಂದರೆ ಹಣ ಪಬ್ಲಿಕ್ ವರ್ಕ್ಸ್ ಇಲಾಖೆಯವರಿಂದ ಡೆಪ್ಯುಟಿ ಕಮಿಷನರ್‌ರವರಿಗೆ ವರ್ಗಾಯಿಸಲಾಗಿದೆ. At the end of the year they will give their reports. Then it can be furnished to the House.

ಶ್ರೀ ಟಿ. ಮಾದಯ್ಯಗೌಡರು.—ಯಾವ ಯಾವ ಶಾಲೆಗಳ ಕಟ್ಟಡಗಳನ್ನು ಡೆಪ್ಯುಟಿ ಕಮಿಷನರ್‌ರವರು ಒಪ್ಪುತ್ತಾರೋ ಅವನ್ನು ಪಬ್ಲಿಕ್ ವರ್ಕ್ಸ್ ಇಲಾಖೆಯವರಿಗೆ ಕಳುಹಿಸಿಕೊಟ್ಟು ಮುಂಜೂರಾತಿಯನ್ನು ಪಡೆಯಬೇಕಲ್ಲವೇ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಅದನ್ನು ಪಡೆದಿರುತ್ತಾರೆ.

ಶ್ರೀ ಟಿ. ಮಾದಯ್ಯಗೌಡರು.—ಹಾಗೆ ಕಳುಹಿಸಿದ್ದರೆ ಈ ವರ್ಷ ಎಷ್ಟು ಶಾಲೆಯ ಕಟ್ಟಡಗಳಿಗೆ ಮುಂಜೂರಾತಿ ದೊರೆತಿದೆ ಎಂಬ ಅಂಶವನ್ನು ತಿಳಿಸಬಲ್ಲರಾ?

Sri T. SIDDALINGIAH.—The Hon'ble Member's question is about 1949-50, the current year, which is not yet over. Definite answer can be given only after the official year is over.

ಶ್ರೀ ಟಿ. ಮಾದಯ್ಯಗೌಡರು.—ಮೂರು ತಿಂಗಳಿಗೆ ಒಂದು ಸಲ ಡೆಪ್ಯುಟಿ ಕಮಿಷನರ್‌ರವರು ವರದಿಯನ್ನು ಕಳುಹಿಸಿಕೊಡಬೇಕೆಂದು ನಿಯಮವಿದೆಯಲ್ಲವೇ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಅವರು ಕೇಳಿರುವ ಪ್ರಶ್ನೆ 1949–50ಕ್ಕೆ ಸಂಬಂಧಪಟ್ಟಿದ್ದು. Till the year is over, I am not expected to give piecemeal quarterly reports.

ಶ್ರೀ ಟಿ. ಮಾದಯ್ಯಗೌಡರು.—ಇಲ್ಲಿಯವರೆಗೂ ತಾವು ಉತ್ತರವನ್ನು ದಯಪಾಲಿಸಿದ್ದೀರಿ. ಆದರೆ ಇಲ್ಲಿಯ ತನಕ ಎಷ್ಟು ಪಾಠಶಾಲೆಗಳನ್ನು ಕಟ್ಟಿಸಲಾಗಿದೆ. ಅದಕ್ಕಾಗಿ ಎಷ್ಟು ಹಣ ಖರ್ಚಾಗಿರುತ್ತೆಂಬುದನ್ನು ಹೇಳುವುದಕ್ಕಾಗುತ್ತದೆಯೇ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಅದನ್ನು ಈ ತಕ್ಷಣಕ್ಕೆ ತಿಳಿಸಲಕ್ಕಾಗುವುದಿಲ್ಲ.

ಶ್ರೀ ಟಿ. ಮಾದಯ್ಯಗೌಡರು.—ತಾವು ತಿಳಿಸಿರುವ 7,22,000 ರೂಪಾಯಿಗಳ ಪೈಕಿ ಎಷ್ಟು ಹಣ ಇಲ್ಲಿಯವರೆಗೆ ಖರ್ಚಾಗಿದೆ, ಎಷ್ಟು ಹಣ ಇನ್ನೂ ಖರ್ಚಾಗಬಹುದು, ಅಥವಾ ಉಳಿದರೆ ಎಷ್ಟು ಉಳಿಯಬಹುದೆಂಬುದನ್ನು ಹೇಳುವುದಕ್ಕಾಗುತ್ತದೆಯೇ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಈಗ ಸಾಧ್ಯವಿಲ್ಲ.

ಶ್ರೀ ಟಿ. ಮಾದಯ್ಯಗೌಡರು.—ತಮ್ಮ ರಿವೈಸ್ಡ್ ಬಡ್ಜೆಟ್ ಅಂದಾಜಿನ ಪ್ರಕಾರ ಎಷ್ಟು ಹಣ ಖರ್ಚಾಗಿದೆಯೆಂಬುದನ್ನು ಹೇಳಬಹುದಲ್ಲವೇ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಅದನ್ನು ಬಡ್ಜೆಟ್ಟಿನಲ್ಲೇ ಕೊಟ್ಟಿದೆ.